ಹೊಸದುರ್ಗ ಪ್ರಮುಖ ರಸ್ತೆ ದುರಸ್ತಿಯ ಬಗ್ಗೆ

೧೦೩೯ ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದ ೨೦ ವರ್ಷಗಳಿಂದಲೂ ದುರಸ್ತಿಯಾಗದೆ ತಗ್ಗು ಗುಂಡಿಗಳಿಂದ ಹೊಸದುರ್ಗ ಪ್ರಮುಖ ರಸ್ತೆ (ಹಳಿಯೂರು–ಹೊಳಲ್‌ಕೆರೆ ರಸ್ತೆ) ಸಂಚಾರಕ್ಕೆ, ತೊಂದರೆಯಾಗಿರುವುದು ಹಾಗೂ ದುಸ್ಥಿತಿಯಲ್ಲಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ. ಹಾಗಿದ್ದಲ್ಲಿ, ಈ ರಸ್ತೆ ದುರಸ್ತಿಗೆ ಸರ್ಕಾರದವರು ಜರೂರಾಗಿ ಕ್ರಮ ಕೈಗೊಳ್ಳುವರೇ ?

ಇ. ಈ ಸದರಿ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಹಾಗೂ ಜನರಿಗೆ ಆಗಿರುವ ತೊಂದರೆಯನ್ನು ಎಷ್ಟು ಕಾಲಾವಧಿಯಲ್ಲಿ ನಿವಾರಿಸಲಾಗುವುದು ?

ಶ್ರೀ. ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ. ಮತ್ತು ಆ) ಹೊಸದುರ್ಗದ ಒಳಗೆ ಹಾದು ಹೋಗುವ ಈ ರಾಜ್ಯ ಹೆದ್ದಾರಿಯ ಭಾಗವನ್ನು ೧೯೮೬–೮೭ನೇ ಸಾಲಿನ ಆಯವ್ಯಯದಲ್ಲಿ ರೂ. ೩,೫೦,೦೦೦–೦೦ಗಳ ಅಂದಾಜಿನಲ್ಲಿ ಸೇರಿಸಲಾಗಿದೆ. ಈ ಕೆಲಸವನ್ನು ನಿಯಮಗಳಿಗನುಸಾರ ತೆಗೆದುಕೊಳ್ಳಲಾಗುವುದು.

ಇ. ಹಣಕಾಸಿನ ಲಭ್ಯತೆಗನುಗುಣವಾಗಿ ಈ ಕೆಲಸವನ್ನು ಆದಷ್ಟು ಜಾಗ್ರತೆ ಮಂಗಿಸಲು ಪ್ರಯತ್ನಿಸಲಾಗುವುದು.

ಮಂದ್ಲಾಪುರದಲ್ಲಿ ಅಪೂರ್ಣ ಸ್ಥಿತಿಯಲ್ಲಿರುವ ಬ್ಯಾರೇಜ್

೧೩೫೪. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ವಿಂದೋಳ್ ತಾಲ್ಲೂಕಿನ ಮಂದ್ಲಾಪುರ ಗ್ರಾಮದ ಹತ್ತಿರ ಘಟಪ್ರಭಾ ನದಿಗೆ ಅಡ್ಡಗಟ್ಟಿನ (ಬ್ಯಾರೇಜ್) ನಿರ್ಮಾಣ ಕಾರ್ಯ ಎಷ್ಟು ವರ್ಷಗಳ ಹಿಂದೆ ಆರಂಭವಾಯಿತು? ಮಂತ್ರ್ಯ ಅದರ ಆಗಿನ ಅಂದಾಜು ವೆಚ್ಚ ಎಷ್ಟು ?

ಆ. ಇದರ ನಿರ್ಮಾಣದ ಕಾರ್ಯ ಇದ್ದಕ್ಕಿದ್ದಂತೆ ಸ್ಥಗಿತಗೊಳ್ಳಲು ತಾಂತ್ರಿಕ ಅಥವಾ ಹಣಕಾಸಿನ ಪರಿಸ್ಥಿತಿ ಏನಾದರೂ ಕಾರಣವೇ?

ಇ. ಹಾಗಿದ್ದಲ್ಲಿ ಅಪೂರ್ಣ ಸ್ಥಿತಿಯಲ್ಲಿರುವ ಈ ಅಡ್ಡಗಟ್ಟಿನ ನಿರ್ಮಾಣ ಕಾರ್ಯವನ್ನು ಈಗ ಪೂರ್ತಿಗೊಳಿಸುವ ವಿಚಾರವೇನಾದರೂ ಸರ್ಕಾರದಲ್ಲಿದೆಯೇ ?

ಈ. ಹಾಗಿದ್ದಲ್ಲಿ ಅದನ್ನು ಯಾವಾಗ ಪುನರಾರಂಭಿಸಲಾಗುವುದು?

ಶ್ರೀ. ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ. ಸುಮಾರು ೧೦ ವರ್ಷಗಳ ಹಿಂದೆ ೧೨.೨೦ ಲಕ್ಷ ರೂಪಾಯಿಗಳು

ಆ. ಇಲ್ಲ. ಟೆಂಡರ್ ಗುತ್ತಿಗೆದಾರರು ಮಧ್ಯದಲ್ಲಿಯೇ ಕೆಲಸವನ್ನು ನಿಲ್ಲಿಸಿದುದೇ ಕಾರಣ.

ಇ. ಹೌದು.

ಈ. ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.